ನಿನ್ನೆ ಹಾಕಿರುವಂತಹ ಮೊಕದ್ದಮೆಗಳನ್ನು ದಯಮಾಡಿ ವಾಪಸ್ಸು ತೆಗೆದು ಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಸದಾಶಿವ ಆಯೋಗದ ವರದಿಯಲ್ಲಿ ಸರ್ಕಾರ ಈ ಹಿಂದೆ ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದರೆ ಇವತ್ತು ಈ ಸ್ಥಿತಿ ಬರುತ್ತಿರಲಿಲ್ಲ. ನಿನ್ನೆ 15,000 ರಿಂದ 16,000 ಜನ ಸೇರಿದ್ದಾರೆಂಬ ಮಾಹಿತಿ ಸರ್ಕಾರಕ್ಕೆ ಗೊತ್ತು. Intelligence Department fail ಆಗಿದೆಯೋ ಅಥವಾ ಅಧಿಕಾರಿಗಳಿಗೆ ಮಾಹಿತಿ ಇರಲಿಲ್ಲವೋ ಏನೋ ಗೊತ್ತಿಲ್ಲ. 16,000 ಜನರನ್ನು ಇಲ್ಲಿಯವರೆಗೆ ಬರುವುದಕ್ಕೆ ಬಿಟ್ಟು ಅನಾವಶ್ಯ ಕವಾಗಿ ಅವರ ಮೇಲೆ ಲಾಠಿ ಪ್ರಹಾರ ಮಾಡಿ ಅವರನ್ನು ಜೈಲಿಗೆ ಹಾಕಿ ಅವರಿಗೆ ಅನಾವಶ್ಯಕವಾಗಿ ತೊಂದರೆಯಾಗಿದೆ. ಹಿಂದೆ ಕೂಡ ಅನೇಕ ಘಟನೆ ಗಳಲ್ಲಿ ಹಾಕಿದ್ದ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಂಡಿದ್ದಾರೆ. ದಯಮಾಡಿ ಅವರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇವೆ.

ಅಧ್ಯಕ್ಷರು : ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಟಿ.ಬಿ. ಜಯಚಂದ್ರ : ನಿನ್ನೆಯೆಲ್ಲಾ ಚರ್ಚೆಯಾಗಿದೆ. ಉತ್ತರ ಕೊಡುತ್ತೇವೆಂದು ಹೇಳಿ. ಉತ್ತರ ಕೊಡಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಆಮೇಲೆ ಕೊಡಿಸುತ್ತಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮೊದಲು ಉತ್ತರವನ್ನು ಹೇಳಲಿ.

ಅಧ್ಯಕ್ಷರು : ಉತ್ತರವನ್ನು ಕೊಡುತ್ತೇನೆಂದರೆ ಹೇಳಿದ್ದಾರಲ್ಲ. ಮಧ್ಯಾಹ್ನ ಕೊಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿಯಮ 60 ರಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ನಿಯಮ 69 ರಲ್ಲಿ ತೆಗೆದುಕೊಳ್ಳೋಣ. ನಂತರ ಅವಕಾಶ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಪ್ರಸ್ತಾಪ ಮಾಡದೆ 69ರಲ್ಲಿ ತೆಗೆದುಕೊಳ್ಳುವುದೇ?

ಅಧ್ಯಕ್ಷರು : ಪ್ರಸ್ತಾಪವನ್ನು ಆಗಲೇ ಮಾಡಿದ್ದೀರಿ.